ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):- ಮಾನ್ಯ ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2003ನೇ ಸಾಲಿನ ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ;

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2003ನೇ ಸಾಲಿನ ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು:- ಈಗ ನಾನು ಎಂಎಲ್ಎಗಳು ಫಾರಿನ್ಗೆ ಹೋಗುವ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಒಂದು ರೂಲಿಂಗ್ ಕೊಡುತ್ತೇನೆ.

4) ಸಭಾಧ್ಯಕ್ಷರ ತೀರ್ಪು

ವಿಷಯ:- ಶಾಸಕರು ವಿದೇಶ ಪ್ರವಾಸ ಕೈಗೊಂಡಿದ್ದಾರೆಂಬ ಹೇಳಿಕೆಗೆ ಸಂಬಂಧಪಟ್ಟಂತೆ ಹಕ್ಕು ಬಾಧ್ಯತಾ ಸಮಿತಿಗೆ ಒಪ್ಪಿಸುವ ಬಗ್ಗೆ

ದಿನಾಂಕ 24-03-2003 ರಂದು ವಿಧಾನ ಸಭಾ ಸದಸ್ಯರಾದ ಶ್ರೀಯುತರುಗಳಾದ ಕೆ.ಬಿ. ಮಲ್ಲಿಕಾರ್ಜುನ, ಕೆ. ಜಯಪ್ರಕಾಶ್ ಹೆಗ್ಡೆ, ಮಹದೇವ ಪ್ರಸಾದ್ ಹಾಗೂ ಎ.ಬಿ. ಪಾಟೀಲ್ ರವರುಗಳು ಹಕ್ಕುಚ್ಯುತಿ ಸೂಚನೆ ಸಲ್ಲಿಸಿ ಶಾಸಕರು ಬರಗಾಲದಲ್ಲಿ ವಿದೇಶ ಪ್ರವಾಸ ಮಾಡಿದ್ದಾರೆಂದು ಆಪಾದಿಸಿ ಬೆಂಗಳೂರಿನ ಹಿರಿಯ ನಾಗರೀಕರಾದ ಶ್ರೀ ಬಿ. ಕೃಷ್ಣಭಟ್ ರವರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯಲ್ಲಿ, ಮೊದಲ ಹಂತದಲ್ಲಿ ನೀಡಿದ ತಡೆಯಾಜ್ಞೆಯಿಂದ ಹಾಗೂ ಆ ಮೂಲಕ (ಪತ್ರಿಕಾ ವರದಿಗಳಿಂದ) ಉಂಟಾದ ಗೊಂದಲದಿಂದ ಶಾಸಕರ ಗೌರವ ಮತ್ತು ಹಕ್ಕಿಗೆ ಚ್ಯುತಿಯುಂಟಾಗಿದೆಯೆಂದು, ಈ ಬಗ್ಗೆ ಸದನದಲ್ಲಿ ನಿಯಮ 191ರಡಿಯಲ್ಲಿ ಚರ್ಚಿಸಲು ಅನುಮತಿ ಕೋರಿದ್ದರಿಂದ ಪೂರ್ವಭಾವಿ ಚರ್ಚೆಗೆ ಅವಕಾಶ ನೀಡಲಾಯಿತು.

ಈ ಸದನದ ಸದಸ್ಯರು ಸರ್ಕಾರದ ವೆಚ್ಚದಲ್ಲಿ, (ರಿಟ್ ಅರ್ಜಿಯಲ್ಲಿ ನಮೂದಿಸಿರುವಂತೆ) ಯಾವುದೇ ವಿದೇಶ ಯಾತ್ರೆ ಕೈಕೊಂಡಿರುವುದಿಲ್ಲ ಹಾಗೂ ವಿದೇಶ ಯಾತ್ರೆಗೆ ಸರ್ಕಾರದಿಂದಾಗಲಿ, ವಿಧಾನ ಮಂಡಲದಿಂದಾಗಲಿ ಯಾವುದೇ ಆದೇಶ ಹೊರಡಿಸಿಲ್ಲ. ಇದು ದುರುದ್ದೇಶದಿಂದ, ಕೇವಲ ಅಗ್ಗದ ಪ್ರಚಾರ ಪಡೆಯಲು ಮತ್ತು ಈ ಸದನದ, ಸದಸ್ಯರ ಗೌರವ, ಘನತೆ ಮತ್ತು ಕಾರ್ಯವೈಖರಿಗೆ ಧಕ್ಕೆ, ಕಳಂಕ ತರುವ ಏಕೈಕ ಉದ್ದೇಶದಿಂದ ಸತ್ಯಕ್ಕೆ ದೂರವಾದ ವಿಚಾರದ ಬಗ್ಗೆ ರಿಟ್ ಅರ್ಜಿಯನ್ನು ಸಲ್ಲಿಸಿ, ಶ್ರೀ ಬಿ. ಕೃಷ್ಣಭಟ್ ರವರು ಹಕ್ಕುಚ್ಯುತಿ ಮಾಡಿದ್ದಾರೆಂದು ಮಂಡಿಸಿರುವ ಸದಸ್ಯರ ಅಭಿಪ್ರಾಯವಾಗಿದೆ.

ರಾಜ್ಯದ ನ್ಯಾಯಾಲಯ, ಈ ರಿಟ್ ಅರ್ಜಿಯನ್ನು ದಿನಾಂಕ 6-3-2003 ರಂದು ವಿಚಾರಣೆಗೆ ತೆಗೆದುಕೊಂಡು, ಅರ್ಜಿದಾರರು ರಿಟ್ ಅರ್ಜಿ ಸಲ್ಲಿಸುವ ಮೊದಲು ಯಾವುದೇ ಆದೇಶಗಳ ಆಧಾರವನ್ನು ಪರಿಶೀಲಿಸದೆ, ಕೇವಲ ದಿನಪತ್ರಿಕೆಯ ಸುದ್ದಿಯನ್ನು ಪರಿಗಣಿಸಿರುವುದನ್ನು ಮನಗಂಡು, ಅರ್ಜಿಯಲ್ಲಿ, ಯಾವುದೇ ಹುರುಳಿಲ್ಲವೆಂದು ತೀರ್ಮಾನಿಸಿ, ರಿಟ್‌ನ್ನು ವಜಾ ಮಾಡಿರುತ್ತಾರೆ.

ಈ ಹಿಂದೆಯೂ ಕೂಡ, ಶ್ರೀಯುತ ಬಿ. ಕೃಷ್ಣಭಟ್ ಅವರ ಮೇಲೆ 1988ರಲ್ಲಿ ಅಂದಿನ ಶಾಸಕರಾದ ಶ್ರೀ ಆರ್. ವೆಂಕಟರಾಮಯ್ಯ ಅವರು ನನಗೆ ಹಕ್ಕುಚ್ಯುತಿಯಾಗಿದೆ ಎಂದು ಆಪಾದಿಸಿದ್ದು, ಆನಂತರ, ಹಕ್ಕು ಬಾಧ್ಯತಾ ಸಮಿತಿಯ ಮುಂದೆ ಶ್ರೀ ಬಿ. ಕೃಷ್ಣಭಟ್ ಅವರು ಕ್ಷಮಾಯಾಚನೆ ಮಾಡಿದ ಹಿನ್ನೆಲೆಯಲ್ಲಿ, ಪ್ರಕರಣವನ್ನು ಮುಕ್ತಾಯಗೊಳಿಸಲಾಗಿತ್ತು. ಅದೇ ರೀತಿ ಈಗಲೂ ಕೂಡ, ಶ್ರೀಯುತ ಬಿ. ಕೃಷ್ಣಭಟ್ ಅವರು ಸತ್ಯಾಸತ್ಯತೆಯನ್ನು ಪರಿಶೀಲಿಸದೆ, ಶಾಸಕರು ವಿದೇಶ ಪ್ರವಾಸ ಮಾಡಿದ್ದಾರೆ / ಮಾಡುತ್ತಿದ್ದಾರೆ, ಎಂದು ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ಉಚ್ಚನ್ಯಾಯಾಲಯಕ್ಕೆ ಸಲ್ಲಿಸಿ, ಶಾಸಕರ ಗೌರವ, ಘನತೆಗೆ ಹಾಗೂ ಕಾರ್ಯನಿರ್ವಹಣೆಗೆ ಕಳಂಕ ಹಾಗೂ ಅಡಚಣೆ ಉಂಟು ಮಾಡಿರುವುದು, ಕಂಡು ಬರುತ್ತದೆ. ಈ ರೀತಿ, ಶ್ರೀಯುತರು ಪದೇ ಪದೇ ಶಾಸಕರ ಮೇಲೆ ಪೂರ್ವಾಪರ ಯೋಚಿಸದೇ, ಆಪಾದಿಸುವುದು ತರವಲ್ಲ. ಇಂತಹ ಪ್ರವೃತ್ತಿಗಳಿಗೆ, ಇತಿಶ್ರೀ ಹಾಡುವ ಹಿನ್ನೆಲೆಯಲ್ಲಿ, ಈ ಸೂಚನೆಯನ್ನು, ಸಂವಿಧಾನದ 211 ಮತ್ತು 212ನೇ ವಿಧಿಯ ಪರಿಮಿತಿಗೆ ಒಳಪಟ್ಟಂತೆ ಹಾಗೂ ನ್ಯಾಯಾಲಯದ ಅಧಿಕಾರಕ್ಕೆ ಧಕ್ಕೆಯುಂಟಾಗದ ರೀತಿಯಲ್ಲಿ ವಿಷಯವನ್ನು ಪರಿಶೀಲಿಸಲು, ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸುತ್ತೇನೆ.

5) ವಿಷಯ:- ಸಿ.ಇ.ಟಿ. ಬಗ್ಗೆ

ಅಧ್ಯಕ್ಷರು:- ಭೈರೇಗೌಡರೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಎಲ್ಲಾ ಸಂತೋಷವಾಗಿ ಯುಗಾದಿ ಹಬ್ಬಕ್ಕೆ ಹೋಗೋಣ. ಶೆಟ್ಟರ್ ರವರೇ ಎಲ್ಲಾ ಸಂತೋಷವಾಗಿ ಹಬ್ಬಕ್ಕೆ ಹೋಗೋಣ.

(ಗೊಂದಲ)

ಶ್ರೀ ಸಿ. ಭೈರೆಗೌಡ:- ಮಾನ್ಯ ಅಧ್ಯಕ್ಷರೆ, ಇವತ್ತು ಈ ಸಮಸ್ಯೆ ಸಾಮಾನ್ಯ ಸಮಸ್ಯೆ ಅಲ್ಲ. ವಿದ್ಯಾವಂತ ಯುವಕರಾಗಿರುವವರಿಗೆ ಜೀವನದಲ್ಲಿ ನಿರಾಸೆಯನ್ನು ತರತಕ್ಕಂಥ ಸಮಸ್ಯೆ. ಆ ನಿರಾಸೆಯಿಂದ ಯುವಕರನ್ನು ಪಾರು ಮಾಡಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ. ಇವತ್ತು ಬಹಳ ಸರಳವಾದ ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟಿದ್ದೇವೆ. ರಾಜ್ಯದಲ್ಲಿ ಇರತಕ್ಕಂಥ ಲಕ್ಷಾಂತರ ಯುವಕರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಬೇಡಿಕೆಯನ್ನು ಇಟ್ಟಿದ್ದೇವೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬೇಕಲ್ಲ.

ಅಧ್ಯಕ್ಷರು:- ಅವರ ಕಷ್ಟ ಸುಖ ಹೇಳಿದ್ದಾರಲ್ಲಾ.

ಶ್ರೀ ಸಿ. ಭೈರೇಗೌಡ:- ನಾನು ತಮಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಒಂದು ವೇಳೆ ಸರ್ಕಾರಕ್ಕೆ ಅವರೇನಾದರೂ ಕೂಡ ಸಚಿವ ಸಂಪುಟದಲ್ಲಿ ಅಥವಾ ಉಪಸಮಿತಿಯಲ್ಲಿ ತೀರ್ಮಾನ ಮಾಡಬೇಕು ಅಥವಾ ಅಲ್ಲೋ ಇಲ್ಲೋ ಹೋಗಿ ಕೇಳಿಕೊಂಡು ಬರಬೇಕೆಂದು ಇದ್ದರೆ, ಇವತ್ತು ಸದನವನ್ನು ಮುಂದೂಡಿ ಮೂರು ದಿವಸ ಆದ ಮೇಲೆ ಕರೆಯಿರಿ. ಅವರು